8) ಸಂಸ್ಥೆಯ ಆರ್ಥಿಕ ಪರಿಸ್ಥಿತಿ:-

2008-09 ನೇ ಸಾಲಿನಲ್ಲಿ ಪ್ರಾಧಿಕಾರದಿಂದ ನಿರ್ವಹಿಸಿರುವ ನಗದು ಪುಸ್ತಕ, ಪೂರಕವಾದ ಚೆಕ್ ಸ್ವೀಕೃತಿ ಹಾಗೂ ವಿತರಣೆ ವಹಿ ಮತ್ತು ಸಂಸ್ಥೆಯವರು ದೃಢೀಕರಿಸಿದ ಅಂಕಿ ಅಂಶಗಳ ಆಧಾರದ ಮೇಲೆ ಆರ್ಥಿಕ ಪರಿಸ್ಥಿತಿಯನ್ನು ತಾತ್ಕಾಲಿಕವಾಗಿ ಸಿದ್ಧಪಡಿಸಲಾಗಿದೆ. ಸದರಿ ಸಂಸ್ಥೆಯವರು ಈ ಕೆಳಕಂಡ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದೇವನಹಳ್ಳಿಯಲ್ಲಿ ಸಾಲ್ಕು ಖಾತೆಗಳನ್ನು ತೆರೆದು ಆರ್ಥಿಕ ವಹಿವಾಟನ್ನು ನಡೆಸುತ್ತಿದ್ದು ವಹಿವಾಟಿಗೆ ಸಂಬಂಧಿಸಿದ ಜಮೆ-ಖರ್ಚಿನ ವಿವರವನ್ನು ಅನುಬಂಧ 1 ರಲ್ಲಿ ಈ ವರದಿಗೆ ಲಗತ್ತಿಸಿದೆ.

ವಿವರ	ಸಕ್ರಮ ಅಕ್ರಮ ಖಾತೆ ಎಸ್‌ಬಿಎಂ ದೇವನಹಳ್ಳಿ 64024380771	ಕೆರೆಗಳ ಸಂರಕ್ಷಣೆ ಖಾತೆ ಎಸ್‌ಬಿಎಂ ದೇವನಹಳ್ಳಿ 64015221836	ಪ್ರಾಧಿಕಾರ ಖಾತೆ ಎಸ್‌ಬಿಎಂ ದೇವನಹಳ್ಳಿ 54034600699	ಉದ್ಯಾನವನ ಮತ್ತು ಬಯಲು ಜಾಗ ಖಾತೆ ಎಸ್‌ಬಿಎಂ ದೇವನಹಳ್ಳಿ 640130545635	ಒಟ್ಟು
1.4.08 ಕ್ಕೆ ಪ್ರಾ.ಶಿಲ್ಕು	364310	10760773	3233553	-	14358636
2008-09 ರಲ್ಲಿ ಸ್ವೀಕೃತಿ	16206	52028134	516934793	255135	569234268
ಒಟ್ಟು	380516	62788907	520168346	255135	583592904
2008-09 ರಲ್ಲಿ ವೆಚ್ಚ	-	55993987	517148287	-	573142274
31.3.09 ಕ್ಕೆ ಅಂತಿಮಶಿಲ್ಕು	380516	6794920	3020029	255135	10450630

ಲೆಕ್ಕ ಸಮನ್ವಯ:-

31.3.09 ಕ್ಕೆ ಸಾಮಾನ್ಯ ನಗದು ಪುಸ್ತಕದ ಪ್ರಕಾರ ಆಖ್ಯೆರು ಶಿಲ್ಕು	10450630
31.3.09 ಕ್ಕೆ ಬ್ಯಾಂಕ್ ಪಾಸು ಪುಸ್ತಕಗಳ ಪ್ರಕಾರ ಆಖ್ಯೆರುಶಿಲ್ಕು	8160411
ವ್ಯತ್ಯಾಸ:	2290219

ವ್ಯತ್ಯಾಸಕ್ಕೆ ಕಾರಣಗಳು:-

ನಗದಾಗದ ಚೆಕ್‌ಗಳು ಮತ್ತು ಹೊಂದಾಣಿಕೆಯಾಗದ ಮೊತ್ತ:-

1) ಖಾತೆ ಸಂಖ್ಯೆ ಎಸ್‌ಬಿಎಂ 21836

ನಗದು ಪುಸ್ತಕದ ಪ್ರಕಾರ ಆಖ್ಯೈರು ಶಿಲ್ಕು	6794920	
ಬ್ಯಾಂಕ್ ಪಾಸು ಪುಸ್ತಕಗಳ ಪ್ರಕಾರ ಆಖ್ಯೈರುಶಿಲ್ಕು	5534933	
ವ್ಯತ್ಯಾಸ:	**1259987**	**1259987**

ಈ ಕೆಳಕಂಡ ರಸೀದಿ ಮೊತ್ತಗಳನ್ನು ಬ್ಯಾಂಕಿನಲ್ಲಿ ಹೊಂದಾಣಿಕೆಯಾಗಿಲ್ಲ.

1) ರಸೀತಿ ಸಂ: 1661/31-3-09	417500
2) ರಸೀತಿ ಸಂ: 1663/31-3-09	842487
ವ್ಯತ್ಯಾಸ:	**1259987**

2) ಖಾತೆ ಸಂಖ್ಯೆ ಎಸ್‌ಬಿಎಂ 00699

ನಗದು ಪುಸ್ತಕದ ಪ್ರಕಾರ ಆಖ್ಯೈರು ಶಿಲ್ಕು	3020059	
ಬ್ಯಾಂಕ್ ಪಾಸು ಪುಸ್ತಕಗಳ ಪ್ರಕಾರ ಆಖ್ಯೈರುಶಿಲ್ಕು	1989827	
ವ್ಯತ್ಯಾಸ:	**1030232**	**1030232**
		2290219

ಬ್ಯಾಂಕಿನಲ್ಲಿ ಹೊಂದಾಣಿಕೆಯಾಗದ ರಸೀದಿಗಳು	1053170
ನಗದಾಗದ ಚೆಕ್‌ಗಳು	(-) 22938
ವ್ಯತ್ಯಾಸ:	**1030232**

ಹೊಂದಾಣಿಕೆಯಾಗದ ರಸೀದಿ ವಿವರಗಳು			
1.	1633	9.3.09	500
2.	1660	31.3.09	238220
3.	1662	31.3.09	682500
4.	1664	31.3.09	29120
5.	1665	31.3.09	500
6.	1666	31.3.09	1100
7.	1667	31.3.09	130
8.	1668	31.3.09	1100
		ಒಟ್ಟು:	**1053170**

ಮಾರ್ಚ್ ಅಂತ್ಯಕ್ಕೆ ನಗದಾಗದ ಚೆಕ್‌ಗಳು			
1.	613598	15.11.07	300
2.	613534	31.08.07	750
3.	390116	30.11.07	800
4.	390141	31.12.07	600
5.	390158	30.01.08	600
6.	390178	23.02.08	200
7.	394944	31.07.08	6063
8.	019553	30.09.08	450
9.	392580	31.10.08	620
10	019582	31.10.08	650
11	019561	30.9.08	120
12	145524	31.01.09	600
13	162927	30.03.09	10201
		ಒಟ್ಟು:	22938

ಸಂಸ್ಥೆಯಿಂದ ನೀಡಿದ ಚೆಕ್‌ಗಳು 6 ತಿಂಗಳೊಳಗೆ ನಗದೀಕರಣವಾಗದಿದ್ದಲ್ಲಿ ಅಂತಹ ಚೆಕ್‌ಗಳ ಮೊತ್ತವನ್ನು ರಸೀದಿ ಮೊತ್ತವೆಂದು ಪರಿಗಣಿಸಿ ನಗದು ಪುಸ್ತಕದಲ್ಲಿ ಜಮೆ ತೆಗೆದುಕೊಳ್ಳಬೇಕು. ಆದರೆ ಸದರಿ ಸಂಸ್ಥೆಯಲ್ಲಿ ನಗದಾಗದ ಚೆಕ್‌ಗಳ ಕ್ರಮಸಂಖ್ಯೆ 1 ರಿಂದ 7 ರ ವರೆಗಿನ ಚೆಕ್‌ಗಳು 6 ತಿಂಗಳು ಗತಿಸಿದ್ದರೂ ನಗದಾಗದ ಚೆಕ್‌ಗಳ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗಿದೆ. ಇನ್ನು ಮುಂದೆ ಇವುಗಳನ್ನು ರಸೀದಿ ಮೊತ್ತವೆಂದು ಪರಿಗಣಿಸಿ ವಿವರವನ್ನು ಮುಂದಿನ ಲೆಕ್ಕ ತನಿಖೆಗೆ ಒದಗಿಸಲು ಸೂಚಿಸಿದೆ.

ಪ್ರಾರಂಭಶಿಲ್ಕಿನಲ್ಲಿ ವ್ಯತ್ಯಾಸ:-

2007-08 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಂತೆ ಅಂತಿಮಶಿಲ್ಕು	9317664
2008-09 ನೇ ಸಾಲಿನಲ್ಲಿ ನಗದುಪುಸ್ತಕ ಮತ್ತು ದೃಢೀಕರಿಸಿಕೊಟ್ಟ ಮಾಹಿತಿಯಂತೆ ಪ್ರಾರಂಭಶಿಲ್ಕು	14358636
ವ್ಯತ್ಯಾಸ:	5040972

ರೂ.5040972/- ಗಳ ವ್ಯತ್ಯಾಸಕ್ಕೆ ಸೂಕ್ತ ವಿವರಣೆಯನ್ನು ಒದಗಿಸಲು ಲೆಕ್ಕ ವಿಚಾರಣಾ ಸಂಖ್ಯೆ 2/2009-10/ದಿನಾಂಕ: 22-6-09 ರಲ್ಲಿ ಜಾರಿಗೊಳಿಸಿದ್ದು, ಸದರಿ ವ್ಯತ್ಯಾಸ 1996-97 ರಿಂದ ಇಲ್ಲಿಯವರೆಗೆ ಮುಂದುವರೆದುಕೊಂಡು ಬಂದಿರುವುದಾಗಿ, 2008-09 ನೇ ಸಾಲಿನಲ್ಲಿ ಪ್ರತ್ಯೇಕ ಖಾತೆವಾರು ವಿವರಗಳನ್ನು ತಯಾರಿಸಿಕೊಂಡು ಹೊಂದಾಣಿಕೆಯಾಗದ ರಸೀದಿಗಳು ಮತ್ತು ನಗದಾಗದ ಚೆಕ್ಕುಗಳನ್ನು ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕಗಳಿಗೆ ಸಮನ್ವಯಗೊಳಿಸಿದ್ದು ಈಗ ಸರಿಪಡಿಸಲಾದ ರೂ.14358636/- ಪ್ರಾರಂಭಿಕ ಶಿಲ್ಕಾಗಿ ಪರಿಗಣಿಸಲು ಕೋರಿದ್ದಾರೆ. ಮುಂದುವರೆದು 1996 ರಿಂದ ಇಲ್ಲಿಯವರೆಗೂ ಲೆಕ್ಕ ಸಮನ್ವಯ ಮಾಡಿ ವಿವರಗಳನ್ನು ಮುಂದಿನ ಲೆಕ್ಕ ತನಿಖೆಗೆ ಒದಗಿಸಲಾಗುವುದೆಂದು ಉತ್ತರಿಸಿದ್ದಾರೆ. ಕೂಡಲೇ ಲೆಕ್ಕ ಸಮನ್ವಯದ ಬಗ್ಗೆ ಕ್ರಮ ಕೈಗೊಳ್ಳುವುದು.